## ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

ರವರ ಕಛೇರಿ

(CIN) : U40109KA2004SGC035177
ನಿಗಮ ಕಛೇರಿ : ನಂ. 29, ವಿಜಯನಗರ,
2ನೇ ಹಂತ, ಹಿನಕಲ್
ಮೈಸೂರು-570 017
www.cescmysore.org

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಸೆಸ್ಕ್, ಆಲೂರು
ದೂ.ಸಂ. 081702-218233
E.Mail : aeealur@gmail.com

ಕ್ರಮಾಂಕ : ಸ.ಕಾ.ಇಂ(ವಿ)/ಸ.ಇಂ(ತಾಂ)/**ಆಲೂರು**/2018-19/ 641-44 ದಿನಾಂಕ : 3-8-18

13

### ಜನಸಂಪರ್ಕ ಸಭೆಯ ನಡವಳಿಗಳು

ದಿನಾಂಕ-16.07.2018.ರ ಸೋಮವಾರ ದಂದು ಶ್ರೀಮತಿ ಭಾರತಿ ಅಧೀಕ್ಷಕ ಇಂಜಿನಿಯರ್ (ವಿ) (ಪ್ರಭಾರಿ) ಹಾಸನರವರ ಅಧ್ಯಕ್ಷತೆಯಲ್ಲಿ ಆಲೂರು ಉಪವಿಭಾಗ ಕಛೇರಿಯಲ್ಲಿ ನಡೆಸಿದ ಜನಸಂಪರ್ಕ ಸಭೆಯ ನಡವಳಿಗಳು

### ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು

1. ಶ್ರೀಮತಿ ಭಾರತಿ ಅಧೀಕ್ಷಕ ಇಂಜಿನಿಯರ್ (ವಿ) (ಪ್ರಭಾರಿ) ಹಾಸನ.
2. ಶ್ರೀ ನಾರಾಯಣ ಭೋವಿ ಕಾರ್ಯಪಾಲಕ ಇಂಜಿನಿಯರ್ (ವಿ)ಸಕಲೇಶಪುರ ವಿಭಾಗ
3. ಶ್ರೀ ರಂಗೇಗೌಡ ಎಮ್.ಬಿ. ಸ.ಕಾ.ಇಂ (ವಿ) ಆಲೂರು ಉಪವಿಭಾಗ
4. ಶ್ರೀ ಹರೀಶ್, ಲೆಕ್ಕಾಧಿಕಾರಿ, ಸಕಲೇಶಪುರ ವಿಭಾಗ
5. ಶ್ರೀ ತೋಟಪ್ಪ, ಲೆಕ್ಕಾಧಿಕಾರಿ (ಆಂ.ಪ), ಸಕಲೇಶಪುರ ವಿಭಾಗ
6. ಶ್ರೀಮತಿ ಬಿಂದು ಸಹಾಯಕ ಇಂಜಿನಿಯರ್(ತಾಂತ್ರಿಕ) ಆಲೂರು ಉಪವಿಭಾಗ
7. ಶ್ರೀ ಅಬ್ದುಲ್, ಕಿರಿಯ ಇಂಜಿನಿಯರ್ (ವಿ) ಪಾಳ್ಯ ಶಾಖೆ.
8. ಶ್ರೀ ನಾಗರಾಜು ಕಿರಿಯ ಇಂಜಿನಿಯರ್ (ವಿ) ಆಲೂರು ಶಾಖೆ.
9. ಶ್ರೀ ರಂಗೇಗೌಡ,ಹಿರಿಯ ಸಹಾಯಕರು, ಕಂದಾಯ ಶಾಖೆ,ಆಲೂರು.

ಶ್ರೀ ಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ,ಸ್ವಾಗತಿಸುವ ಮೂಲಕ ಸಭೆಯನ್ನು ಮಧ್ಯಾಹ್ನ 3:00 ಗಂಟೆಗೆ ಪ್ರಾರಂಭ ಮಾಡಿದರು.

---

### ಜನಸಂಪರ್ಕ ಸಭೆಯಲ್ಲಿ ದಾಖಲಾದ ದೂರಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ.

**1)** ಶ್ರೀ ಹೆಚ್.ಎನ್ ಧರ್ಮಲಿಂಗಂ ಬಿನ್ ನಿಂಗಪ್ಪಗೌಡ ಹಸಗನೂರುರವರು, ಗ್ರಾಮದಲ್ಲಿ ಗದ್ದೆ ಬದಿಯಲ್ಲಿ ಲೈನ್ ತುಂಬಾ ಬಾಗಿದ್ದು ಬೀಳುವ ಸ್ಥಿತಿಯಲ್ಲಿದೆ, ಹಾಗೂ ಇದೇ ಮಾರ್ಗದಲ್ಲಿ ಈಶ್ವರ ದೇವಸ್ಥಾನದ ಕಂಬವು ಕೂಡ ಶಿಥಿಲವಾಗಿದೆ, ಇದನ್ನು ಶೀಘ್ರವಾಗಿ ಬದಲಿಸಿ ಕೊಡುವಂತೆ ಕೇಳಿ ಕೊಂಡರು.

ಸಭೆಯ ಅಧ್ಯಕ್ಷರು ಪಾಳ್ಯ ಶಾಖಾಧಿಕಾರಿಗಳಿಗೆ ಸ್ಥಳ ಪರಶೀಲಿಸಿ ಕ್ರಮವಹಿಸುವಂತೆ ಸೂಚಿಸಿದರು.

Scanned by CamScanner

2) ಮೆರ್ವೆ ಗ್ರಾಮಸ್ಥರು ಕುಂದೂರು ಹೋಬಳಿ ರವರು ಮೆರ್ವೆ ಗ್ರಾಮದ ದೊಡ್ಡಕೆರೆ ಏರಿ ಮೇಲ ಪರಿವರ್ತಕದ ಕಂಬಗಳು ತುಂಬ ಶಿಥಿಲವಾಗಿದ್ದು, ಅದನ್ನು ಬದಲಾಯಿಸುವಂತೆ ಮನವಿ ಮಾಡಿದರು ಹಾಗೂ ಗ್ರಾಮದಲ್ಲಿ ಸುಮಾರು 15 ಕಂಬಗಳು ಸಂಪೂರ್ಣ ಶಿಥಿಲವಾಗಿದ್ದು ತುರ್ತಾಗಿ ಬದಲಾಯಿಸಲು ಮನವಿ ಮಾಡಿದರು.

8) ... ತುಂ...
ನೀರಿಗೆ ...

ಸಭೆಯ ಅಧ್ಯಕ್ಷರು ಮಗ್ಗೆ, ಶಾಖಾಧಿಕಾರಿ ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಸ್ಥಳ ಪರಿಶೀಲನೆ ಮಾಡಿ ಶಿಥಿಲಗೊಂಡಿರುವ ಕಂಬಗಳನ್ನು ಬದಲಾಯಿಸಲು ಅಂದಾಜು ಪಟ್ಟಿ ತಯಾರಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಈ ಸಂಬಂಧ ಅಂದಾಜು ಪಟ್ಟಿ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದ್ದು ಮಂಜೂರಾತಿ ನಿರೀಕ್ಷಣೆಯಲ್ಲಿ ಇರುತ್ತದೆ ಎಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ) ಆಲೂರು ರವರು ತಿಳಿಸಿದರು.

3) ಶ್ರೀ ಗಂಗರಾಜು ಭರತೂರು (ಮೊಬೈಲ್ ನಂ :-9480249673) ರವರು NRIP-6 ಐ.ಪಿ ಸ್ಥಾವರಕ್ಕೆ2003-04 ರಲ್ಲಿ ವಿದ್ಯುತ್ ಸಂಪರ್ಕ ಪಡೆದಿದ್ದು ಲೈನ್‌ನ ವಾಹಕಗಳು ಹಳೆಯದಾಗಿದ್ದು ಬದಲಾಯಿಸಿ ಕೊಡಲು ಕೋರಿದರು

ಸಭೆಯ ಅಧ್ಯಕ್ಷರು ಮಗ್ಗೆ ಶಾಖಾಧಿಕಾರಿಗಳಿಗೆ ವಾಹಕ ಬದಲಾಯಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

4) ನಲ್ಲೂರು ಗ್ರಾಮಸ್ಥರು, ನಲ್ಲೂರಿನಲ್ಲಿ ಕುಡಿಯುವ ನೀರಿನ ಪರಿವರ್ತಕವು ಸುಟ್ಟು ಹೋಗಿ 4-5 ತಿಂಗಲು ಕಳೆದಿದ್ದು ಕುಡಿಯುವ ನೀರಿಗೆ ಸಾಕಷ್ಟು ಸಮಸ್ಯೆವುಂಟಾಗಿದ್ದು ಪರಿವರ್ತಕವನ್ನು ತುರ್ತಾಗಿ ಬದಲಾಯಿಸಿ ಕೊಡುವಂತೆ ಕೋರಿದರು.

ಸಭೆಯ ಅಧ್ಯಕ್ಷರು ಮಗ್ಗೆ ಶಾಖಾಧಿಕಾರಿಗಳಿಗೆ ತುರ್ತಾಗಿ ಪರಿವರ್ತಕವನ್ನು ಬದಲಾಯಿಸಲು ಸೂಚಿಸಿದರು.

5) ಕಿತ್ತಗಳಲೆ ಗ್ರಾಮಸ್ಥರು, 4 ಪರಿವರ್ತಕಗಳಿಗೆ ಒಂದೇ ಇರುವುದರಿಂದ ಗ್ರಾಮಗಳಿಗೆ ವಿದ್ಯುತ್ ಸರಬರಾಜು ಮಾಡಲು ಸಮಸ್ಯೆಯಾಗಿದ್ದು 2 ಕಂಬಗಳನ್ನು ಹಾಕಿ ಲೈನ್ ನ್ನು ಬೇರ್ಪಡಿಸಿ ಪ್ರತ್ಯೇಕ ಲೈನ್ ಮಾಡುವಂತೆ ವಿನಂತಿಸಿದರು.

ಸಭೆಯ ಅಧ್ಯಕ್ಷರು ಮಗ್ಗೆ, ಶಾಖಾಧಿಕಾರಿ ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಸ್ಥಳ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

6) ಅಧ್ಯಕ್ಷರು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಆಲೂರು ತಾಲ್ಲೂಕು ಚಿಗಳೂರು ಗ್ರಾಮದಲ್ಲಿ ತುಂಬಾ ಸಮಸ್ಯೆ ಇದ್ದು, ಸಮರ್ಪಕವಾಗಿ ವಿದ್ಯುತ್ ಸಂಪರ್ಕ ನೀಡುವಂತೆ ಕೋರಿದರು.

ಸಭೆಯ ಅಧ್ಯಕ್ಷರು ಪಾಳ್ಯ ಶಾಖಾಧಿಕಾರಿಗಳಿಗೆ ಸಮರ್ಪಕವಾಗಿ ಫೀಡರ್ ಗಳ ನಿರ್ವಹಣೆಯನ್ನು ಮಾಡಿ ಅಡಚಣೆರಹಿತ ವಿದ್ಯುತ್ ಸರಬರಾಜು ಮಾಡಲು ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಿದರು.

7) ಶ್ರೀ ವೆಂಕಟೇಶ್ ಗ್ರಾಮ ಪಂಚಾಯ್ತಿ ಸದಸ್ಯರು ಹಂಚೂರು ರವರು ಸಂತೇಬಸವನಹಳ್ಳಿ ಗ್ರಾಮದಲ್ಲಿ ಕುಡಿಯುವನೀರಿನ ಪರಿವರ್ತಕವು ಸುಟ್ಟು ಹೋಗಿದ್ದು, 5 ತಿಂಗಳಾದರೂ ಬದಲಾಯಿಸಿರುವುದಿಲ್ಲ, ಇದರಿಂದ ಗ್ರಾಮದ ಜನರಿಗೆ ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿದ್ದು ಅದಷ್ಟು ಬೇಗ ಪರಿವರ್ತಕ ಬದಲಾಯಿಸುವಂತೆ ಕೋರಿದರು.

ಸಭೆಯ ಅಧ್ಯಕ್ಷರು ಮಗ್ಗೆ, ಶಾಖಾಧಿಕಾರಿಗಳಿಗೆ ಪರಿವರ್ತಕವನ್ನು ಬದಲಾಯಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಿದರು.

ಶಾಖಾಧಿಕಾರಿಗಳು ಸಿಂಗಲ್ ಫೇಸ್ ವಿದ್ಯುತ್ ಸರಬರಾಜು ನೀಡಲಾಗಿದೆ. ಈ ಮಾರ್ಗದಲ್ಲಿ ಅನಧೀಕೃತ ಐ.ಪಿ.ಸ್ಥಾವರಗಳಿದ್ದು ಸಕ್ರಮಗೊಳಿಸಿದ ತಕ್ಷಣ ಪರಿವರ್ತಕ ಬದಲಾಯಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

Scanned by CamScanner

8) ಶಿವಸಾಗರ ಗ್ರಾಮಸ್ಥರು, ಕುಡಿಯುವ ನೀರಿಗೆ 4 ದಿನಗಳಿಂದ ವಿದ್ಯುತ್ ಸಂಪರ್ಕವಿಲ್ಲ ಇದರಿಂದ ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿದ್ದು ಅದಷ್ಟು ಬೇಗ ವಿದ್ಯುತ್ ಸಂಪರ್ಕ ನೀಡುವಂತೆ ಕೋರಿದರು.

ಸಭೆಯ ಅಧ್ಯಕ್ಷರು ಪಾಳ್ಯ ಶಾಖಾಧಿಕಾರಿಗಳಿಗೆ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಿದರು.

9) ಕಗ್ಗರವಳ್ಳಿ ಗ್ರಾಮಸ್ಥರು ಸರ್ಕಾರದಿಂದ ಕೊಳವೆ ಬಾವಿ ಕೊರೆಸಿದ್ದು ಇದಕ್ಕೆ ವಿದ್ಯುತ್ ಸಂಪರ್ಕ ನೀಡುವಂತೆ ವಿನಂತಿಸಿದರು

ಸಭೆಯ ಅಧ್ಯಕ್ಷರು ಸಮಕ್ಷ ಪ್ರಾಧಿಕಾರದಿಂದ ಆಲೂರು ಉಪವಿಭಾಗದಲ್ಲಿ ಅರ್ಜಿಯನ್ನು ನೋಂದಾಯಿಸಿದಲ್ಲಿ ನಿಯಮಾನುಸಾರ ವಿದ್ಯುತ್ ಸಂಪರ್ಕ ನೀಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

10) ಶ್ರೀ ಕೆ.ಆರ್ ಗಂಗಾರಾಜು ಅಡಿಬೈಲು ರವರು ಶ್ರೀ ರಂಗನಾಥ ದೇವಸ್ಥಾನದ ಹತ್ತಿರ ಇರುವ ಪರಿವರ್ತಕದ ಕಂಬದ ಮೇಲೆ ಸಿಲ್ವರ್ ಮರ ಬಿದ್ದಿದ್ದು ಅದನ್ನು ತೆರವುಗೊಳಿಸುವಂತೆ ತಿಳಿಸಿದರು.

ಸಭೆಯ ಅಧ್ಯಕ್ಷರು ಮಗ್ಗೆ ಶಾಖಾಧಿಕಾರಿಗಳಿಗೆ ಕಂಬದ ಮೇಲೆ ಬಿದ್ದಿರುವ ಸಿಲ್ವರ್ ಮರವನ್ನು ಕೂಡಲೇ ತೆರವುಗೊಳಿಸುವಂತೆ ಸೂಚಿಸಿದರು.

ಸಭೆಯ ಅಧ್ಯಕ್ಷರು ಉಪವಿಭಾಗದ ಪ್ರಗತಿಯಲ್ಲಿರುವ **IPDS**, ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ವಿದ್ಯುದೀಕರಣ ಯೋಜನೆ, ಗಂಗಾ ಕಲ್ಯಾಣ ಮತ್ತು **UNIP** ಯ ಪ್ರಗತಿಯ ಬಗ್ಗೆ ಚರ್ಚಿಸಿದರು.

ಸಭೆಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲ ಅಧಿಕಾರಿ/ ನೌಕರರುಗಳನ್ನು ವಂಧಿಸುವ ಮೂಲಕ ಸಭೆಯನ್ನು ಸಂಜೆ 6:00 ಗಂಟೆಗೆ ಮುಕ್ತಾಯಗೊಳಿಸಲಾಯಿತು.

31/7

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪವಿಭಾಗ,ಸೆಸ್ಕ್.ಆಲೂರು.

**ಪ್ರತಿಗಳನ್ನು, ಗೌರವಪೂರ್ವಕವಾಗಿ:-**

1) ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ,ಚಾ.ವಿ.ಸ.ನಿ.ನಿ. ಹಾಸನರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
2) ಕಾರ್ಯಪಾಲಕ ಇಂಜಿನಿಯರ್ (ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ. ಸಕಲೇಶಪುರ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
3) ಲೆಕ್ಕಾಧಿಕಾರಿ (ಆಂ.ಪ) ಹಾಸನ ವಿಭಾಗ.
4) ಲೆಕ್ಕಾಧಿಕಾರಿ ಸಕಲೇಶಪುರ ವಿಭಾಗೀಯ ಕಛೇರಿ
5) ಕಛೇರಿ ಪ್ರತಿ.

Scanned by CamScanner